ಗದಗ ಜಿಲ್ಲೆಯನ್ನು ರಚಿಸುವ ಬಗ್ಗೆ

೨೫೬. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶ್ರೀ ವಾಸುದೇವರಾವ್ ಮತ್ತು ಶ್ರೀ ಹುಂಡೇಕರ್ ಸಮಿತಿಯವರು ಗದಗ್ ಜಿಲ್ಲೆಯನ್ನು ರಚಿಸುವ ಬಗ್ಗೆ ಸಲ್ಲಿಸಿರುವ ವರದಿಯ ಜಾರಿಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಈ ವರದಿಗಳು ಸರ್ಕಾರದ ಪರಿಗಣನೆಯಲ್ಲಿರುತ್ತದೆ ಹಾಗೂ ಅಂತಿಮ ತೀರ್ಮಾನವನ್ನು ಅತಿ ಶೀಘ್ರ ತೆಗೆದುಕೊಳ್ಳಲಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ನೀಡಲಾದ ಪ್ರಶ್ನೆಗಳ ಉತ್ತರ ಪಟ್ಟಿಯನ್ನು ಸಭೆಯ ಮುಂದಿಟ್ಟಿದ್ದೇನೆ.

ಅಧ್ಯಕ್ಷರು.—ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ಭೂ ಸುಧಾರಣೆಯ ಕುರಿತು

೨೦೯. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲಾ ಸಿರಸಿ ಸಿದ್ದಾಪುರ ತಾಲ್ಲೂಕು ಭೂ ಸುಧಾರಣೆ ಕಾನೂನಿನ ಅನ್ವಯ ಅಧಿಭೋಗದಾರ ಹಕ್ಕು ಪಡೆದ ರೈತರಿಂದ ಭೂ ಪರಿಹಾರ ಕಂತಿನ ಹಣ ವಸೂಲಾತಿಗೆ ಅಧಿಕಾರಿಗಳು ಜಪ್ತಿ ನೋಟೀಸನ್ನು ಜಾರಿಗೊಳಿಸಿ ರೈತರಿಗೆ ತೊಂದರೆ ಕೊಡುತ್ತಿರುವುದು ಸರ್ಕಾರದಪರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಸಚಿವರು).—

ಅ) ಕಾನೂನಿನ ಪ್ರಕಾರ ಯಾರು ಯಾರು ಪ್ರೀಮಿಯಂ ಹಣ ಬಾಕಿ ಕೊಡಬೇಕೋ ಅಂತಹವರಿಗೆ, ಕಾನೂನಿನ ಪ್ರಕಾರ ನೋಟೀಸು ನೀಡಲಾಗಿದೆಯೇ ಹೊರತು, ಕಾನೂನು ಬಾಹಿರವಾಗಿ ರೈತರಿಗೆ ತೊಂದರೆ ನೀಡುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಹುಬ್ಬಳ್ಳಿಯ ಅರಣ್ಯ ಇಲಾಖೆಯಲ್ಲಿ ರೆವಿನ್ಯೂ ಇಲಾಖೆಗೆ ಬಿಡುಗಡೆಗೊಳಿಸಿದ ಜಮೀನಿನ ಕುರಿತು

೨೧೦. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿಯ ಅರಣ್ಯ ಇಲಾಖೆಯಲ್ಲಿ ಕಂದಾಯ ಇಲಾಖೆಗೆ ಬಿಡುಗಡೆ ಮಾಡಿದ ಅರಣ್ಯ ಭೂಮಿಯ ವಿಸ್ತೀರ್ಣ ಎಷ್ಟು ? ಹಾಗೂ ಸದರಿ ಭೂಮಿಯನ್ನು ಜನರಿಗೆ ನಿವೇಶನಕ್ಕಾಗಿ ನೀಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಅವರಲ್ಲಿ ಹರಿಜನ ಗಿರಿಜನರಿಗೆ ಎಷ್ಟು ನಿವೇಶನ ಹಂಚಲಾಗಿದೆ ಹಾಗೂ ಆ ಬಗ್ಗೆ ನಿವೇಶನ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು? (ಜಿಲ್ಲೆವಾರು ಹೆಸರು ಹಾಗೂ ವಿಳಾಸಗಳನ್ನೊದಗಿಸುವುದು)

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಕೇವಲ ೨೦ ಎಕರೆ ಭೂಮಿಯು ಅರಣ್ಯ ಇಲಾಖೆಯಿಂದ ಅರಣ್ಯೇತರ ಉದ್ದೇಶಕ್ಕೆ ಬಿಡುಗಡೆಯಾಗಿದೆ ಇದರಲ್ಲಿಂದ ಯಾವದೇ ಜಮೀನು ನಿವೇಶನವನ್ನಾಗಿ ಹಂಚಿರುವದಿಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಕುರಿತಂ

೨೧೨. ಶ್ರೀ ಗೋಪಾಲ ಮಯಕೊಂದ ಕಾನಡೆ (ಸಿರ್ಸಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ನೌಕರಿ ಸೇರಿದವರ ಸಂಖ್ಯೆ ಎಷ್ಟು, ಈ ಬಗ್ಗೆ ನಾಗರೀಕ ಹಕ್ಕುಗಳ ಘಟಕದವರು ಎಷ್ಟು ಜನರನ್ನು ಈ ವಿಚಾರವಾಗಿ ವಿಚಾರಣೆಗೆ ಗುರಿಪಡಿಸಿ ಸರಕಾರದ ಗಮನಕ್ಕೆ ತಂದಿದ್ದಾರೆ ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಕಳೆದ ಮೂರು ವರ್ಷಗಳಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ಉದ್ಯೋಗ ಪಡೆದವರ ದೃಢಪಟ್ಟ ಸಂಖ್ಯೆ ೧೨೨. ವಿಚಾರಣಾ ಹಂತದಲ್ಲಿರುವ ಸಂಖ್ಯೆ ೧೬೧. ನಾಗರೀಕ ಹಕ್ಕು ಜಾರಿ ಘಟಕವು ಈ ಎಲ್ಲಾ ೧೨೨ ಪ್ರಕರಣಗಳಲ್ಲಿ ತನಿಖೆ ನಡೆಸಿ, ಸ್ಥಿರಪಡಿಸಿಕೊಂಡು, ಸರ್ಕಾರದ ಗಮನಕ್ಕೆ ತಂದಿರುತ್ತೆ. ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.